# ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
# ಪ್ರಧಾನ ಕಛೇರಿ, ಹೊಸಪೇಟೆ.

**ದೂರವಾಣಿ** : 08394 – 228208, 228209

ಕ್ರಸಂ:/ದಿ.ಗೂ.ನೌ.ಟೆ /1543 /2024–25. ದಿನಾಂಕ: 08.07.2024

**:: ಟೆ ಂ ಡ ರ್ ಪ್ರ ಕ ಟ ಣೆ ::**

## ಡಾಕ್ಯೂಮೆಂಟ್ ನಂ. 1

ನಮ್ಮ ಬ್ಯಾಂಕಿನ ಕೇಂದ್ರ ಕಛೇರಿ ಹಾಗೂ 33 ಶಾಖೆಗಳಿಗೆ ರಾತ್ರಿ ಕಾವಲುಗಾರರಾಗಿ ಹಾಗೂ ವಿವಿಧ ಶಾಖೆಗಳಲ್ಲಿ ಕಿರಿಯ ಸಹಾಯಕರಾಗಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸಲು ಸಹಾಯಕರನ್ನು ಹಾಗೂ ಕೇಂದ್ರ ಕಛೇರಿಯನ್ನು ಸ್ವಚ್ಚಗೊಳಿಸಲು ಸಹಾಯಕರನ್ನು ದಿನಗೂಲಿ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಅರ್ಹ ಏಜೆನ್ಸಿಯವರಿಂದ ಮುಚ್ಚಿದ ಲಕೋಟಿಯಲ್ಲಿ ಈ ಕೆಳಗಿನಂತೆ ಟೆಂಡರ್ ಕರೆಯಲಾಗಿದೆ.

| ಕ್ರ.ಸಂ. | ಬ್ಯಾಂಕಿನ ಹೆಸರು | ವಿವರ | ಒಟ್ಟು ಸಂಖ್ಯೆ |
|---|---|---|---|
| 1 | ಕೇಂದ್ರ ಕಛೇರಿ. ಹೊಸಪೇಟೆ, ಬಳ್ಳಾರಿ / ವಿಜಯನಗರ ಜಿಲ್ಲೆಗಳ 33 ಶಾಖೆಗಳು | ರಾತ್ರಿ ಕಾವಲುಗಾರರು | 34 |
| 2 | ವಿವಿಧ ಶಾಖಗಳಲ್ಲಿ ಕಾರ್ಯನಿರ್ವಹಿಸಲು | ಕಿರಿಯ ಸಹಾಯಕರು | 16 |
| | | **ಒಟ್ಟು** | **50** |

ಈ ಮೇಲ್ಕಾಣಿಸಿದ ವಿವರದಂತೆ ಅರ್ಹ ಏಜೆನ್ಸಿ ಕಡೆಯವರಿಂದ ಮುಚ್ಚಿದ ಲಕೋಟಿ ಮುಖಾಂತರ ಟೆಂಡರ್ ಕರೆಯಲಾಗಿದ್ದು ಮುಟ್ಟಿದ ಲಕೋಟೆ ಮುಖಾಂತರ ಟೆಂಡರ್‌ನ್ನು ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಹೊಸಪೇಟೆಗೆ ದಿನಾಂಕ **22.07.2024 ಸಾಯಂಕಾಲ 5 ಗಂಟೆಯೊಳಗಾಗಿ** ಸಲ್ಲಿಸತಕ್ಕದ್ದು ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ನಂತರ ಮುಚ್ಚಿದ ಲಕೋಟೆಯ ಟೆಂಡರ್‌ನ್ನು **ದಿನಾಂಕ 23.07.2024 ರಂದು ಮಧ್ಯಾಹ್ನ 3.00** ಗಂಟೆಗೆ ತೆರೆಯಲಾಗುವುದು.

ಟೆಂಡರ್‌ಗಳನ್ನು ರದ್ದು ಪಡಿಸುವ ಮತ್ತು ಮುಂದೂಡುವ ಹಾಗೂ ಅಂಕಿ ಸಂಖ್ಯೆ ಹೆಚ್ಚು ಕಡಿಮೆ ಮಾಡುವ ಅಧಿಕಾರವನ್ನು ಬ್ಯಾಂಕ್ ಹೊಂದಿರುತ್ತದೆ. ಹಾಗೂ ಈ ಕೆಳಗಿನ ಇತರೆ ಷರತ್ತುಗಳನ್ನು ಒಳಗೊಂಡಿರುತ್ತದೆ. ಹಾಗೂ ಬ್ಯಾಂಕ್ ವಿಧಿಸುವ ಇತರೇ ಷರತ್ತುಗಳಿಗೆ ಬದ್ದರಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

**ಸಹಿ : – – – – –**

ಸ್ಥಳ : ಹೊಸಪೇಟೆ

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,**

ದಿನಾಂಕ : 08.07.2024

**ಬಳ್ಳಾರಿ ಡಿ.ಸಿ.ಸಿ. ಬ್ಯಾಂಕ್ ನಿ. ಹೊಸಪೇಟೆ.**

# ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಹೊಸಪೇಟೆ.
# ಅಧಿಸೂಚನೆ ಸಂಖ್ಯೆ: 1543 ದಿನಾಂಕ 08.07.2024

## ಪ್ರಕಟಣೆ ಅರ್ಜಿ ನಮೂನೆ.

| | | |
|---|---|---|
| 1 | ಸಂಸ್ಥೆಯ ಹೆಸರು ಮತ್ತು ವಿಳಾಸ | |
| 2 | ಸಂಸ್ಥೆಯ ಮಾಲೀಕರ ಹೆಸರು | |
| 3 | ಸಂಸ್ಥೆಯು ವಿಮೆಗೆ ಒಳಪಟ್ಟಿದೆಯೇ ? | ಹೌದು / ಇಲ್ಲ<br>(ಹೌದು ಇದ್ದಲ್ಲಿ ಪ್ರತಿ ಲಗತ್ತಿಸುವುದು) |
| 4 | ಸಂಸ್ಥೆಯ ನೊಂದಣಿ ಸಂಖ್ಯೆ ಮತ್ತು ವಿವರ. | ಪ್ರತಿ ಲಗತ್ತಿಸುವುದು |
| 5 | ಸಂಸ್ಥೆಯು ಜಿ.ಎಸ್.ಟಿ. ಹೊಂದಿದೆಯೇ ? | ಹೌದು / ಇಲ್ಲ<br>(ಹೌದು ಇದ್ದಲ್ಲಿ ಪ್ರತಿ ಲಗತ್ತಿಸುವುದು) |
| 6 | ಸಂಸ್ಥೆಯು ಕನಿಷ್ಠ 5 ವರ್ಷಗಳ ಸೇವಾ ಅನುಭವವು ಹೊಂದಿರತಕ್ಕದ್ದು. | ಹೌದು / ಇಲ್ಲ<br>(ಹೌದು ಇದ್ದಲ್ಲಿ ಪ್ರತಿ ಲಗತ್ತಿಸುವುದು) |
| 7 | ಸಂಸ್ಥೆಯು ಯಾವುದೇ ಅಪರಾಧ ಹೊಂದಿದೆಯೇ ? | ಹೌದು / ಇಲ್ಲ |
| 8 | ಒಬ್ಬ ರಾತ್ರಿ ಕಾವಲುಗಾರರಿಗೆ ನಿರೀಕ್ಷಿಸುವ ಸೇವಾ ವೆಚ್ಚ. | |
| 9 | ಒಬ್ಬ ಸಹಾಯಕರಿಗೆ ನಿರೀಕ್ಷಿಸುವ ಸೇವಾ ವೆಚ್ಚ. | |

## ಹೆಚ್ಚುವರಿ ನಿಬಂಧನೆಗಳು :

1. ಬ್ಯಾಂಕಿನ ಕೇಂದ್ರ ಕಛೇರಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಲ್ಲಿರುವ 33 ಶಾಖೆಗಳಲ್ಲಿ ಏಜೆನ್ಸಿಯಿಂದ ಆಯ್ದ ಶಾಖೆಗಳಿಗೆ ಸಹಾಯಕರು ಹಾಗೂ ಬ್ಯಾಂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ **33 ಶಾಖೆಗಳಲ್ಲಿ ಹಗಲು ಮತ್ತು ಕೇಂದ್ರ ಕಛೇರಿ ಒಬ್ಬ ರಾತ್ರಿ ಕಾವಲುಗಾರರು ಹಾಗೂ ಕೇಂದ್ರ ಕಛೇರಿಯಲ್ಲಿ ಒಬ್ಬ ಹಗಲು** ಕಾವಲುಗಾರರನ್ನು ನಿಯೋಜಿಸತಕ್ಕದ್ದು.
2. ಸಂಸ್ಥೆಯವರು ಆಯ್ಕೆಯಾದ ನಂತರ ಬ್ಯಾಂಕಿನಲ್ಲಿ ಸಂಸ್ಥೆಯ ಹಾಗೂ ಬ್ಯಾಂಕಿನ ಹೆಸರಿಗೆ **ರೂ.2,00,000–00** ಗಳನ್ನು ಭದ್ರತಾ ಠೇವಣಿ ಅಥವಾ **ರೂ.5,00,000–00** ಗಳ ಬ್ಯಾಂಕ್ ಗ್ಯಾರೆಂಟಿ ನೀಡತಕ್ಕದ್ದು.
3. ಸದರಿ ಮೊತ್ತಕ್ಕೆ ಅನ್ವಯವಾಗುವ **ಟಿ.ಡಿ.ಎಸ್**. ಮುರುವಳಿ ಮಾಡಿಕೊಳ್ಳಲಾಗುವುದು.
4. ಸಂಸ್ಥೆಯು ಟೆಂಡರ್‌ನಲ್ಲಿ ಭಾಗವಹಿಸುವ ಮುಂಚೆ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹೆಸರಿನಲ್ಲಿ **ರೂ.10,000–00** ಗಳ ಠೇವಣಿ ಇಡತಕ್ಕದ್ದು.
5. ಕೇಂದ್ರ ಕಛೇರಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಶಾಖೆಯಲ್ಲಿನ ಸಹಾಯಕರು **ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 6.00** ಗಂಟೆಯವರೆಗೆ ಕಾರ್ಯ ನಿರ್ವಹಿಸತಕ್ಕದ್ದು. ಸದರಿ ಸಹಾಯಕರು ಕಾರ್ಯವು ಸಂಬಂಧಿಸಿದ ಶಾಖಾ ವ್ಯವಸ್ಥಾಪಕರ ವ್ಯಾಪ್ತಿಗೆ ಒಳಪಟ್ಟಿರತಕ್ಕದ್ದು.

6. ರಾತ್ರಿ ಕಾವಲುಗಾರರು ನಿಯೋಜಿಸಿದ ಶಾಖೆಗಳಲ್ಲಿ ರಾತ್ರಿ ವೇಳೆಯಲ್ಲಿ ಕಳ್ಳತನ / ದರೋಡೆಗಳು / ಇನ್ನಾವುದೇ ಅಹಿತರ ಘಟನೆಗಳು ಆಗದಂತೆ **ಸಂಜೆ 6.30 ಗಂಟೆಯಿಂದ ಬೆಳಿಗ್ಗೆ 6.30 ಗಂಟೆಯವರೆಗೆ** ಕಾರ್ಯ ನಿರ್ವಹಿಸತಕ್ಕದ್ದು.
7. ನಿಯೋಜನೆ ಮಾಡುವ ರಾತ್ರಿ ಕಾವಲುಗಾರರಿಗೆ ಕಂಪನಿಯಿಂದಲೇ ಬ್ಯಾಂಕು ಸೂಚಿಸುವಂತಹ ಸಮವಸ್ತ್ರಗಳನ್ನು ನೀಡತಕ್ಕದ್ದು.
8. ರಾತ್ರಿ ಕಾವಲುಗಾರರು ನಿಯೋಜಿಸಿದ ಆಯಾ ಶಾಖಾ ವ್ಯವಸ್ಥಾಪಕರ ಅಧೀನದಲ್ಲಿ ಹಾಗೂ ನಿರ್ದೇಶನದಂತೆ ಕೆಲಸ ನಿರ್ವಹಿಸತಕ್ಕದ್ದು. ಅಂತಹ ಸ್ಥಳಗಳಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ಶಾಖಾ ವ್ಯವಸ್ಥಾಪಕರಿಗೆ ದೂರು ನೀಡಲು ಸೂಚಿಸಿದೆ.
9. ರಾತ್ರಿ ಕಾವಲುಗಾರರ ಮತ್ತು ಸಹಾಯಕರ ಬಿಲ್ಲನ್ನು ಸಲ್ಲಿಸಿದ ನಂತರ ಶುಲ್ಕವನ್ನು ಪ್ರತಿ ತಿಂಗಳು **5 ನೇ ದಿನಾಂಕದೊಳಗೆ** ಪಾವತಿಸಲಾಗುವುದು.
10. ರಾತ್ರಿ ಕಾವಲುಗಾರರ ಸೇವಾವಧಿಯಲ್ಲಿ ಶಾಖೆಗಳಲ್ಲಿ ಕಳವು / ದರೋಡೆ ಅಥವಾ ಇನ್ನಾವುದೇ ತರಹದ ಅಹಿತಕರ ಘಟನೆ ನಡೆದು ಬ್ಯಾಂಕಿಗೆ ನಷ್ಟ ಉಂಟಾದಲ್ಲಿ ನಿಮ್ಮ ಏಜೆನ್ಸಿಯನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ.
11. ನಿಯೋಜನೆ ಮಾಡುವ ಸಹಾಯಕರು ಹಾಗೂ ರಾತ್ರಿ ಕಾವಲುಗಾರರಿಗೆ ಕಂಪನಿಯಿಂದೆ ವಿಮೆ ಮಾಡಿಸತಕ್ಕದ್ದು.
12. ಬ್ಯಾಂಕು ಕಂಪನಿಗೆ ಪ್ರತಿ ತಿಂಗಳು ಪಾವತಿಸುವ ಒಟ್ಟು ಮೊತ್ತದಲ್ಲಿ **ಶೇಕಡ 10 ರಷ್ಟು** ಮೊತ್ತವನ್ನು ಬ್ಯಾಂಕಿನಲ್ಲಿ ಕಂಪನಿಯ ಹೆಸರಿನಲ್ಲಿ ಭದ್ರತೆಗಾಗಿ ಠೇವಣಿ ಮಾಡತಕ್ಕದ್ದು.
13. ನಿಮ್ಮ ಸೇವೆಯು ಬ್ಯಾಂಕಿಗೆ ತೃಪ್ತಿಕರವಾಗಿಲ್ಲವೆಂದು ಕಂಡು ಬಂದಲ್ಲಿ ಯಾವುದೇ ಸಮಯದಲ್ಲಿ ನಿಯೋಜನೆಯನ್ನು ರದ್ದುಗೊಳಿಸುವ ಅಧಿಕಾರ ಬ್ಯಾಂಕು ಹೊಂದಿರುತ್ತದೆ.
14. ನಿಮ್ಮ ಕಾರ್ಯ ವ್ಯಾಪ್ತಿಯು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗೆ ಮಾತ್ರ ಸೀಮಿತವಾಗಿರುವುದರಿಂದ ಅವಶ್ಯವಿದ್ದಲ್ಲಿ ಜಿಲ್ಲೆಯ ವಿವಿಧ ಶಾಖೆಯಲ್ಲಿ ಕಾರ್ಯ ನಿರ್ವಹಿಸಲು ಸಿದ್ದರಿರತಕ್ಕದ್ದು.
15. ಯಾವುದೇ ಸಂದರ್ಭದಲ್ಲಿ ಬ್ಯಾಂಕಿನ ವಿರುದ್ದ ನ್ಯಾಯಾಲಯಕ್ಕೆ ದೂರು ಹೋಗುವುದನ್ನು ಮತ್ತು ತಕರಾರು ಮಾಡುವುದನ್ನು ಸಂಪೂರ್ಣವಾಗಿ ನಿಷೇದಿಸಲಾಗಿದೆ.
16. ಯಾವುದೇ ಸಹಾಯಕರು ಅಥವಾ ರಾತ್ರಿ ಕಾವಲುಗಾರರು ರಜೆ ಹೋದಲ್ಲಿ ಬೇರೊಬ್ಬರನ್ನು ನಿಯೋಜಿಸುವುದು.
17. ಉತ್ತಮ ನಡತೆ ಹಾಗೂ ಆರೋಗ್ಯ ಮತ್ತು ಸಧೃಡ ರಾತ್ರಿ ಕಾವಲುಗಾರರನ್ನು ನಿಯೋಜಿಸತಕ್ಕದ್ದು.

**ಸಂಸ್ಥೆಯ ಮಾಲೀಕರ ಸಹಿ**
**ಹಾಗೂ ಮೊಹರು**

**ಸ್ಥಳ :**
**ದಿನಾಂಕ :**